**<u>ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟಿ ಸವಾಲುಃ ವಾದಿ ಪರ ಶ್ರೀ ವೈ ಜಿ ಪಿ ವಕೀಲರಿಂದಃ</u>**

ಪ್ರಸ್ತುತ ದಾವೆ ಅಲ್ಲದೆ ಅಸಲು ದಾವಾ ನಂ.110/2019, 140/2019 ಮತ್ತು 79/2019 ನಮ್ಮ ಮಧ್ಯೆ ನಡೆದಿರುತ್ತವೆ ಅಂದರೆ ಸರಿ. ಮೂಲತಃ ನಾನು ಮತ್ತು ಪ್ರತಿವಾದಿಯವರು ದಾಯಾದಿಗಳು ಅಂದರೆ ಸರಿ. ಆಗಿನಿಂದಲೂ ಕುಟುಂಬದಲ್ಲಿ ಆಗಿರುವಂತಹ ವ್ಯವಸ್ಥೆಯಂತೆ ಜಮೀನುಗಳು ಅನುಭವಿಸಿಕೊಂಡು ಬಂದಿರುತ್ತೇವೆ ಅಂದರೆ ಸರಿ. ಪ್ರತಿವಾದಿಯವರು ದಾಖಲಿಸಿದ ದಾವೆಯು ವಜಾಗೊಂಡಿದ್ದು, ಅದರ ವಿರುದ್ಧ ಅವರು ಮೇಲ್ಮನವಿ ಸಲ್ಲಿಸಿರುತ್ತಾರೆ ಅಂದರೆ ಸರಿ. ಸದರಿ ಮೇಲ್ಮನವಿಯು ವಿಚಾರಣೆ ಹಂತದಲ್ಲಿರುತ್ತದೆ ಅಂದರೆ ಸರಿ. ಪ್ರಸ್ತುತ ದಾವೆ ದಾವಾ ಆಸ್ತಿಯ ಖಾನೇಷುಮಾರಿ ನಂ.99 ಆಗಿರುತ್ತದೆ. ಸದರಿ ಆಸ್ತಿಯಲ್ಲಿ ನಮ್ಮ ಹಳೆಯ ಮನೆಯನ್ನು ಕೆಡವಿ ಹೊಸ ಮನೆಯನ್ನು 2022 ರಲ್ಲಿ ಕಟ್ಟಿಕೊಂಡಿರುತ್ತೇವೆ. ದಾವಾ ವಿಚಾರಣೆ ಇರುವಾಗ ಕಟ್ಟಿಕೊಂಡಿರುತ್ತೇವೆ. ಸಂಬಂಧಪಟ್ಟ ಗ್ರಾಮ ಪಂಚಾಯ್ತಿಯವರಿಂದ ಪರವಾನಿಗೆ ಪಡೆದುಕೊಂಡಿರುತ್ತೇನೆ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಯ ತಂದೆಯ ಹೆಸರು ಈರಪ್ಪ ಮಂಚೇರ ಅಂದರೆ ಸರಿ. ಅವರು ದಿಃ 04.05.1980 ರಲ್ಲಿ ಮರಣ ಹೊಂದಿರುತ್ತಾರೆ ಅಂದರೆ ಸರಿ. ಅವರ ಮರಣ ನಂತರ ವಾದಿಗೆ ಪೌತಿಸಬೂಬು ಖಾತೆ ಬದಲಾವಣೆ ಆಯಿತು ಅಂದರೆ ಸರಿ. ಆಗ ಅಲ್ಲಿ ಒಂದು

ಹಳೆ ಮನೆ ಇದ್ದು, ಅದರಲ್ಲಿ ವಾದಿಯವರು ವಾಸವಾಗಿದ್ದರು ಅಂದರೆ ಸಾಕ್ಷಿಯು ಖಾನೇಷುಮಾರಿ ನಂ.96 ರಲ್ಲಿ ವಾಸವಾಗಿದ್ದರು ಎಂದು ಉತ್ತರಿಸುತ್ತಾರೆ. ಖಾನೇಷುಮಾರಿ ನಂ.96 ಮತ್ತು 99 ಹೊಂದಿಕೊಂಡಂತಹ ಆಸ್ತಿಗಳು ಅಂದರೆ ಸರಿಯಲ್ಲ. ಖಾನೇಷುಮಾರರಿ ನಂ.99 ರಲ್ಲಿ ವಾದಿಯವರ ಹಳೆ ಮನೆ ಇದ್ದು, ತಿಪ್ಪೆ ಗುಂಡಿ, ಹುಲ್ಲಿನ ಬಣವೆ, ಎತ್ತುಗಳನ್ನು ಕಟ್ಟಲು ಛಪ್ರ ಇತ್ತು ಅಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯಲ್ಲಿ ವಾದಿಯವರು ಸ್ವಾಧೀನ ಹೊಂದಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ಅಜ್ಜ ದಿಃ 15.03.1964 ರಂದು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ನಿಡಿ–1 ರ 2 ನೇ ಪುಟದ 12 ನೇ ಸಾಲಿನಲ್ಲಿ ಉತ್ತರ ದಿಕ್ಕಿನಲ್ಲಿ ವಾದಿಯವರು ಸ್ವಾಧೀನದಲ್ಲಿ ಇರುತ್ತಾರೆ ಎಂದು ನಮೂದು ಇರುತ್ತದೆ ಅಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ–1 ಆಗುವ ಕಾಲದಿಂದಲೂ ವಾದಿಯವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸುಳ್ಳು. ದಾವಾ ಆಸ್ತಿಯನ್ನು ನನ್ನ ಹೆಸರಿಗೆ 1992 ರಲ್ಲಿ ಮಾಡಿಕೊಂಡಿರುತ್ತೇನೆ. 1992 ರವರೆಗೆ ಸ್ವತ್ತನ್ನು ಸ್ವಾಧೀನ ಹೊಂದಲು ಆಗಲಿಲ್ಲ ಅಂದರೆ ಸುಳ್ಳು.

ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**